ನಿಯಮ-72
ಕ್ರ - 47
ಕಂಪ್ಯೂಟರ್

# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಶಾಂತಾರಾಮ್ ಬುಡ್ನಸಿದ್ದಿ ಇವರು ನಿಯಮ 72 ರಡಿ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಕುರಿತು.

**ಪ್ರಶ್ನೆ:**

ಸರ್ಕಾರವು ವಸತಿ ಶಾಲೆಗಳನ್ನು ನಡೆಸುವ "ಕ್ರೈಸ್. ಸಂಸ್ಥೆಯಲ್ಲಿ ಶಿಕ್ಷಕರ ಕೊರತೆ, ಸಿಬ್ಬಂದಿಗಳ ಕೊರತೆ, ಮತ್ತು ಪದನ್ನೋತಿಗಳು ಸರಿಯಾಗಿ ಆಗುತ್ತಿಲ್ಲದಿರುವುದರ ಬಗ್ಗೆ ಸರ್ಕಾರದ ಗಮನ ಸೆಳೆಯುವುದು.

**ಉತ್ತರ:**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ 830 ವಸತಿ ಶಾಲೆ/ ಕಾಲೇಜುಗಳು (ಪರಿಶಿಷ್ಟ ಜಾತಿ-503, ಪರಿಶಿಷ್ಟ ವರ್ಗ-156, ಹಿಂದುಳಿದ ವರ್ಗ-171) ಕಾರ್ಯನಿರ್ವಹಿಸುತ್ತಿವೆ.

ಸದರಿ ವಸತಿ ಶಾಲೆ/ ಕಾಲೇಜುಗಳಿಗೆ ಮಂಜೂರಾಗಿರುವ/ ಕಾರ್ಯನಿರ್ವಹಿಸುತ್ತಿರುವ/ ಖಾಲಿ ಇರುವ ಬೋಧಕ/ ಬೋಧಕೇತರ ಹುದ್ದೆಗಳ ವಿವರ ಈ ಕೆಳಕಂಡಂತಿದೆ.

| ಕ್ರ. ಸಂ | ವೃಂದ | ಮಂಜೂರಾದ ಹುದ್ದೆಗಳು | ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ | ಅತಿಥಿ/ ಹೊರಸಂಪನ್ಮೂಲ ಸಿಬ್ಬಂದಿಗಳ ಸಂಖ್ಯೆ | ಉಳಿಕೆ ಹುದ್ದೆಗಳು |
|---|---|---|---|---|---|---|
| 1 | ಬೋಧಕ ಸಿಬ್ಬಂದಿಗಳು | 8891 | 4786 | 4105 | 2642 | 2144 |
| 2 | ಬೋಧಕೇತರ | 2210 | 1035 | 1175 | 1016 | 159 |
| ಒಟ್ಟು | | 11101 | 5821 | 5280 | 3658 | 2303 |

7993 ಗ್ರೂಪ್ ಡಿ ಹುದ್ದೆಗಳು ಮಂಜೂರಾಗಿದ್ದು, ಸದರಿ ಹುದ್ದೆಗಳನ್ನು ಆರ್ಥಿಕ ಇಲಾಖೆಯ ನಿರ್ದೇಶನದಂತೆ ಹೊರಸಂಪನ್ಮೂಲ ಏಜೆನ್ಸಿ ಮೂಲಕ ಜಿಲ್ಲಾ ಹಂತದಲ್ಲಿ ನೇಮಕ ಮಾಡಿಕೊಳ್ಳಲಾಗುತ್ತಿದೆ.

ಮೇಲ್ಕಂಡಂತೆ ಖಾಲಿಯಿರುವ ಬೋಧಕ/ ಬೋಧಕೇತರ ಹುದ್ದೆಗಳನ್ನು ಅತಿಥಿ/ ಹೊರಸಂಪನ್ಮೂಲ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ಭರ್ತಿ ಮಾಡಿಕೊಂಡು ವಸತಿ ಶಾಲೆ/ ಕಾಲೇಜುಗಳು ಕಾರ್ಯನಿರ್ವಹಿಸಲಾಗುತ್ತಿದೆ. ಪ್ರಾಂಶುಪಾಲರು, ನಿಲಯಪಾಲಕರು, ಚಿತ್ರಕಲಾ ಶಿಕ್ಷಕರು, ಸಂಗೀತ ಶಿಕ್ಷಕರ ಖಾಲಿ ಹುದ್ದೆಗಳನ್ನು ಅತಿಥಿ/ ಹೊರಸಂಪನ್ಮೂಲ ಸಿಬ್ಬಂದಿಗಳನ್ನು ಭರ್ತಿ ಮಾಡಿಕೊಂಡಿರುವುದಿಲ್ಲ.

ಪ್ರಾಂಶುಪಾಲರು, ನಿಲಯಪಾಲಕರು, ಹುದ್ದೆಗಳಿಗೆ ಆಯಾ ವಸತಿ ಶಾಲೆ/ ಕಾಲೇಜುಗಳ ಹಿರಿಯ ಶಿಕ್ಷಕರುಗಳನ್ನು ಪ್ರಭಾರದಲ್ಲಿ ಇರಿಸಿ ಕಾರ್ಯನಿರ್ವಹಿಸುತ್ತಿರುತ್ತಾರೆ.

ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 804 ವಸತಿ ಶಾಲೆಗಳು ಮಂಜೂರಾಗಿದ್ದು, ಈ ಪೈಕಿ 787 'ಬಿ' ವೃಂದದ ಪ್ರಾಂಶುಪಾಲರ ಹುದ್ದೆಗಳು ಮಂಜೂರಾಗಿದ್ದು, ಈ ಹುದ್ದೆಗಳ ಪೈಕಿ 307 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಹಾಗೂ 328 ಶಿಕ್ಷಕರಿಗೆ ಪ್ರಾಂಶುಪಾಲರ ಹುದ್ದೆಗೆ ಮುಂಬಡ್ತಿ ನೀಡಲಾಗಿರುತ್ತದೆ.

152 ಪ್ರಾಂಶುಪಾಲರ ಹುದ್ದೆಗಳು ಖಾಲಿ ಇದ್ದು ಸದರಿ ಹುದ್ದೆಗಳಲ್ಲಿ 60 ಪ್ರಾಂಶುಪಾಲರ ಹುದ್ದೆಗಳಿಗೆ ಸಂಬಂಧಿಸಿದಂತೆ, ಮಾನ್ಯ ನ್ಯಾಯಾಲಯದಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು ಮತ್ತು ಸಂಗೀತ ಶಿಕ್ಷಕರು ಮುಂಬಡ್ತಿಗಾಗಿ ಪ್ರಕರಣ ದಾಖಲಿಸಿದ್ದು, ಸದರಿ ಹುದ್ದೆಗಳನ್ನು ಹೊರತು ಪಡಿಸಿ ಉಳಿದ 92 ಪ್ರಾಂಶುಪಾಲರ ಹುದ್ದೆಗಳಿಗೆ ಶಿಕ್ಷಕರ ಹುದ್ದೆಗಳಿಂದ ಮುಂಬಡ್ತಿ ನೀಡಲು ನಿಯಮಾನುಸಾರ ಕ್ರಮವಹಿಸಲಾಗುತ್ತಿದೆ.

ಸಕಇ 434 ಎಂಡಿಎಸ್ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು